Construction of Bridges or High Level Causeways.

*Q.—72. Sri T. MADAIAH GOWDA (Ramanagaram).—

Will the Government be pleased to state :—

(*a*) which are all the bridges or high level causeways that the people are urging on the Engineering Department and Government for last several years to be taken up in Ramanagaram Taluk ;

(*b*) whether any investigation conducted with regards to any of them and if so, with what result ;

(*c*) when Government would provide funds for the completion of the above projects and the work taken up early ?

*A.—Sri G. B. SHANKAR RAO (Parliamentary Secretary to the Minister for Public Works).—

(*a*).—

(1) Construction of a high level causeway across Kanva river near Shanubhoganahally on Shanubhoganahally-Kootagal road ;

(2) Construction of bridge across halla in 3/4th mile of Ramanagaram-Kanakapura road ;

(3) Construction of a causeway across Bidadi-halla on Ittamadu-Ramanahally road near Ittamadu Ashrama.

(*b*) Investigations in respect of all the three works have been conducted with the following results :—

Work No. (1) :—A revised estimate amounting to Rs. 1.25 lakhs has been approved by Government.

Work No. (2) :—An estimate amounting to Rs. 71,000 has been approved by Government.

Work No. (3) : An estimate amounting to Rs. 17,000 has been got up and is under scrutiny in the Department.

(*c*) Estimates for works at (1) and (2) above have been approved and they will be taken up immediately after observing necessary formalities. Work at (3) above will be taken up after the estimate is approved, depending upon the availability of funds.

ಶ್ರೀ ಟಿ. ಮಾದಯ್ಯ ಗೌಡ.—ರಾಮನಗರ ತಾಲ್ಲೂಕಿನಲ್ಲಿ ಯಾವ ಯಾವ ಸೇತುವೆಗಳನ್ನು ನಿರ್ಮಿಸಬೇಕೆಂದು ಜನರು ಒತ್ತಾಯಪಡಿಸುತ್ತಿದ್ದಾರೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಮೂರು ಕಡೆಗಳಿಂದ ಒತ್ತಾಯ ಬಂದಿದೆಯೆಂದು ಉತ್ತರ ಹೇಳಿದ್ದೀರಿ. ಅಂದಮೇಲೆ ವೃಷಭಾವತಿ ಮತ್ತು ಅರ್ಕಾವತಿ ನದಿಗಳಿರುವ ಕಡೆಗಳಿಂದ ಮೇಲ್ಮಟ್ಟದ ಒಡ್ಡುದಾರಿಗಳನ್ನು ನಿರ್ಮಿಸುವ ಬಗ್ಗೆ ಯಾವ ತರಹ ಒತ್ತಾಯವೇನಾದರೂ ಬಂದಿದೆಯೇ ?

†ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಕೇಳಿದ ಎರಡು ಕಡೆಗಳಲ್ಲಿಯೂ ಸೇತುವೆ ಬೇಕೆಂದು ಯಾವ ತರಹದ ಒತ್ತಾಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಇನ್ನು ಮುಂದಾದರೂ ಸರ್ಕಾರದವರು ಆ ಬಗ್ಗೆ ಪ್ಲಾನು ಅಂದಾಜುಗಳನ್ನು ಮಾಡಿಸಿ ಆದಷ್ಟು ಜಾಗ್ರತೆ ಆ ಕೆಲಸವನ್ನು ಮಾಡಿಸುವುದಕ್ಕೆ ಏರ್ಪಾಡು ಮಾಡಿಕೊಡುತ್ತಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯ ಗೌಡ.—ಒಂದನೆಯ ಐಟಂ ಶ್ಯಾನುಭೋಗನ ಹಳ್ಳಿ ಬಳಿ ಸೇತುವೆ ಬೇಕೆಂದು ಕೇಳಿ ಬಹಳ ವರ್ಷಗಳಾದುವು. ಅದನ್ನು ಮಾನ್ಯ ಮಂತ್ರಿಗಳಿಗೆ ಹೋದ ವರ್ಷವೇ ತೋರಿಸಿದ್ದೇನೆ. ಆದರೂ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಆದ್ದರಿಂದ ಸರ್ಕಾರದವರು ಈಗಾರಾದರೂ ದಯಮಾಡಿ ಆ ಬಗ್ಗೆ ಸೂಕ್ತ ಆರ್ಡರನ್ನು ಹೊರಡಿಸುತ್ತಾರೆಯೇ ?

Sri G. B. SHANKAR RAO.—The estimates for the bridge has been approved on 29th July 1965 and orders have been communicated to take up the work. After the estimate has been administratively approved, tenders will have to be called for and work has to be entrusted to some agency. This takes a little time.

ಶ್ರೀ ಟಿ. ಮಾದಯ್ಯ ಗೌಡ.—ಎರಡನೆಯ ಐಟಂ ಸೇತುವೆ ಕೆಲಸ ಬಹಳ ವರ್ಷಗಳಿಂದಲೂ ರಾಮನಗರ—ಕನಕಪುರ ರಸ್ತೆಯಲ್ಲಿ ಮಾಡಬೇಕೆಂದು ಬೇಡಿಕೆ ಇದೆ. ಅಲ್ಲಿ ಪ್ರವಾಹ ಬಂದಾಗ್ಗೆ ಜನಗಳು ಮತ್ತು ಗಾಡಿಗಳು ಆ ಕಡೆಯಿಂದ ಈ ಕಡೆಗೆ ಬರುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಈ ವಿಚಾರ ಹಿಂದೆ ಮಾನ್ಯ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೂ ಗೊತ್ತಿದೆ. ಆದ್ದರಿಂದ ಈ ಬಗ್ಗೆ ಅದಷ್ಟು ಜಾಗ್ರತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಈಗಾಗಲೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಅದರ ಅಂದಾಜಿಗೆ ಮಂಜೂರಾತಿಯನ್ನು ಜುಲೈ 29ರಲ್ಲಿಯೇ ಕೊಟ್ಟಿದೆ. ಈಗ ಟೆಂಡರು ಕರೆದು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಟಿ. ಮಾದಯ್ಯ ಗೌಡ.—ಮೂರನೆಯ ಐಟಂ ಇಟ್ಟಮಡು—ರಾಮನಹಳ್ಳಿ ರಸ್ತೆಯ ಬಳಿ ಆಗತಕ್ಕ ಸೇತುವೆ. ಅದು ಬಹಳ ಜರೂರಾಗಿ ಆಗಬೇಕಾಗಿದೆ. ಅದು ಆಗದೇ ಇರುವುದರಿಂದ ಜಮೀನುಗಳಿಗೆ ಹೋಗತಕ್ಕಂಥ ಗೊಬ್ಬರದ ಗಾಡಿಗಳಿಗೆ, ಹೆಚ್ಚಿಗೆ ಫಸಲು ಬೆಳೆಯುವುದಕ್ಕೆ ಜನಗಳಿಗೆ ವಿಪರೀತ ಕಷ್ಟವಾಗಿದೆ. ಅದನ್ನು ತೆಗೆದುಕೊಳ್ಳುವುದಕ್ಕೆ ಅಂದಾಜು ಅನುಮೋದಿಸಬೇಕಾಗುತ್ತದೆ ಮತ್ತು ಹಣದ ಲಭ್ಯತೆ ಬೇಕಾಗುತ್ತದೆ ಎಂಬುದಾಗಿ ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾರೆ. ಇತ್ತೀಚೆಗೆ ಅಂದಾಜನ್ನು ಅನುಮೋದಿಸಲಾಗಿದೆಯೆಂಬುದಾಗಿ ನಾನು ಕೇಳಿದ್ದೇನೆ. ಆದ್ದರಿಂದ ಈಗಲಾದರೂ ಸರ್ಕಾರದವರು ಆ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದಾಯಿತು. ಆದ್ದರಿಂದ ಮಾನ್ಯ ಸದಸ್ಯರಿಗೆ ಈ ಬಗ್ಗೆ ಏನು ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆಯೆಂಬುದು ತಿಳಿದಿರಲು ಸಾಕು.

———

Payment of Compensation to Ryots.

*Q.—77. Sri VEERABHADRAPPA ERAPPA (Yelburga).—

Will the Government be pleased to state :—

(*a*) whether compensation for houses has been paid and lands were granted to the ryots whose lands were reacquired under the Tungabhadra Project in the 1635 Reservoir level area ;

(*b*) whether it has come to their notice that inspite of acquiring lands from the owners for distribution to the affected ryots, the lands have not been put in possession of the ryots so far ?

A.—Sri M. V. KRISHNAPPA (Minister for Revenue).—

(*a*) No house has been submerged due to the raising of the level of the Reservoir to 1635 FRL. Houses of persons who have lost all their lands due to the second submersion are being acquired and compensation would be paid to them.